೨೦

| ಕರ್ನಾಟಕ ವಿಧಾನ ಪರಿಷತ್ತು | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1910 (2220) |
| ಸದಸ್ಯರ ಹೆಸರು | : | ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 26.03.2026 |
| ಉತ್ತರಿಸುವವರು | : | ಮುಖ್ಯಮಂತ್ರಿಯವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಂಜೂರಾಗಿರುವ ಒಟ್ಟು ಸರ್ಕಾರಿ ನೌಕರರ ಹುದ್ದೆಗಳ ಸಂಖ್ಯೆ ಎಷ್ಟು; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಇಲಾಖಾವಾರು ವಿವರ ನೀಡುವುದು) | ರಾಜ್ಯದಲ್ಲಿ ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ: **7,76,414.** ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ: **4,91,533,** ರಾಜ್ಯದ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ಪ್ರಸ್ತುತ ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ: **2,84,881.**<br>ಖಾಲಿಯಿರುವ ಹುದ್ದೆಗಳ ಪೈಕಿ ಗ್ರೂಪ್-ಡಿ ಹಾಗೂ ಗ್ರೂಪ್-ಸಿ ವೃಂದದ ಹುದ್ದೆಗಳಾದ ದತ್ತಾಂಶ ನಮೂದು ಸಹಾಯಕರು ಹಾಗೂ ವಾಹನ ಚಾಲಕರ 96,844 ಹುದ್ದೆಗಳನ್ನು ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗಿದ್ದು, ಈ ರೀತಿ ಭರ್ತಿ ಮಾಡಲಾದ 96,844 ಹುದ್ದೆಗಳನ್ನು ಖಾಲಿ ಇರುವ ಹುದ್ದೆಗಳಲ್ಲಿ ಕಳೆದು ನಿವ್ವಳ **1,88,037** ಹುದ್ದೆಗಳು ಖಾಲಿ ಇರುತ್ತವೆ. ವಿವರಗಳನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ನಿವೃತ್ತರಾದ ನೌಕರರ ಸಂಖ್ಯೆ ಎಷ್ಟು; (ವರ್ಷವಾರು ಇಲಾಖಾವಾರು ವಿವರ ನೀಡುವುದು) | ಕಳೆದ ಮೂರು ವರ್ಷಗಳು ಅಂದರೆ 2023, 2024, 2025ನೇ ಸಾಲಿನಲ್ಲಿ ನಿವೃತ್ತರಾದ ನೌಕರರ ಸಂಖ್ಯೆ: **37,921.** ವರ್ಷವಾರು ಮತ್ತು ಇಲಾಖಾವಾರು ವಿವರಗಳನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಇ) | ಲಕ್ಷಾಂತರ ಹುದ್ದೆಗಳು ಖಾಲಿಯಿದ್ದರೂ ಸಹ ನೇಮಕಾತಿ ಮಾಡಿಕೊಳ್ಳದೆ ಇರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಖಾಲಿ ಹುದ್ದೆಗಳನ್ನು ಭರ್ತಿಮಾಡಲಾಗುವುದು; | ಪರಿಶಿಷ್ಟ ಜಾತಿಯ ವರ್ಗಕ್ಕೆ ನೇಮಕಾತಿಗಳಲ್ಲಿ ಒಳ ಮೀಸಲಾತಿ ನಿಗದಿಪಡಿಸುವ ಪ್ರಕ್ರಿಯೆಯು ಪೂರ್ಣಗೊಳ್ಳುವವರೆಗೆ ಹುದ್ದೆಗಳ ಭರ್ತಿಗೆ ದಿನಾಂಕ 25-11-2024ರ ಸುತ್ತೋಲೆಯಲ್ಲಿ ತಾತ್ಕಾಲಿಕ ತಡೆ ನೀಡಲಾಗಿತ್ತು.<br><br>ಸರ್ಕಾರವು ಒಳಮೀಸಲಾತಿ ಅಳವಡಿಸಲು ದಿನಾಂಕ 25-8-2025ರಂದು ಆದೇಶ ಹೊರಡಿಸಿದ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ತಡೆ ಹಿಡಿಯಲಾದ ನೇಮಕಾತಿ ಪ್ರಕ್ರಿಯೆಯನ್ನು ದಿನಾಂಕ 10-9-2025ರ ಸುತ್ತೋಲೆಯಲ್ಲಿ ಹಿಂಪಡೆದು ಸದರಿ ಆದೇಶದನ್ವಯ ಒಳಮೀಸಲಾತಿ ಅಳವಡಿಸಿಕೊಂಡು ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನೇರ ನೇಮಕಾತಿಯ ಪ್ರಕ್ರಿಯೆಯನ್ನು ಪ್ರಾರಂಭಿಸಲು ಸರ್ಕಾರದಿಂದ ನಿರ್ದೇಶನಗಳನ್ನು ನೀಡಲಾಗಿದೆ.<br><br>ಖಾಲಿಯಿರುವ ಹುದ್ದೆಗಳ ಪೈಕಿ ಗ್ರೂಪ್-ಡಿ ಹಾಗೂ ಗ್ರೂಪ್-ಸಿ ಹುದ್ದೆಗಳಾದ ವಾಹನ ಚಾಲಕರು ಹಾಗೂ ದತ್ತಾಂಶ ನಮೂದು ಸಹಾಯಕ (ಬೆರಳಚ್ಚುಗಾರ) 96,844 ಹುದ್ದೆಗಳನ್ನು ಗುತ್ತಿಗೆ / ಹೊರಗುತ್ತಿಗೆ ಆಧಾರದ ಮೇಲೆ ಈಗಾಗಲೇ ಭರ್ತಿ ಮಾಡಲಾಗಿದೆ.<br><br>ಮುಂದುವರೆದು, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 8,157 ಹುದ್ದೆಗಳ ನೇಮಕಾತಿಯನ್ನು ಪೂರ್ಣಗೊಳಿಸಲಾಗಿದೆ ಹಾಗೂ 3,081 ಹುದ್ದೆಗಳ ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. |

| | | |
|---|---|---|
| | | ದಿನಾಂಕ: 27-2-2026ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2026 ರಲ್ಲಿ, ಖಾಲಿಯಿರುವ ನೇರ ನೇಮಕಾತಿ ಹುದ್ದೆಗಳಲ್ಲಿ 56,432 ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯನ್ನು ಮುಂದಿನ 30 ದಿನಗಳಲ್ಲಿ ಪ್ರಾರಂಭಿಸುವಂತೆ ಎಲ್ಲಾ ಇಲಾಖೆಗಳಿಗೆ/ ನೇಮಕಾತಿ ಪ್ರಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ (ಅನುಬಂಧ-3). |
| ಈ) | ಸರ್ಕಾರಿ ನೌಕರರಿಗೆ ಜೇಷ್ಠತಾ ಪಟ್ಟಿ ಸಿದ್ಧಪಡಿಸಲು ಇರುವ ಮಾರ್ಗಸೂಚಿಗಳು ಏನು; ಕಳೆದ ಮೂರು ವರ್ಷಗಳಲ್ಲಿ ಪ್ರತಿ ವರ್ಷ ವಾರ್ಷಿಕ ಜೇಷ್ಠತಾ ಪಟ್ಟಿ ಪ್ರಕಟಿಸಿರುವ ಇಲಾಖೆಗಳು ಯಾವುವು; ಜೇಷ್ಠತಾ ಪಟ್ಟಿ ಪ್ರಕಟಿಸದ ಇಲಾಖೆಗಳು ಯಾವುವು? (ಇಲಾಖಾವಾರು ಸಂಪೂರ್ಣ ವಿವರ ನೀಡುವುದು) | ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು, 1957ರಲ್ಲಿ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸುವ ಬಗ್ಗೆ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ.<br>ದಿನಾಂಕ: 16.07.1996ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 07 ಸೇನೆನಿ 96ರಲ್ಲಿ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲು ನಮೂನೆಯನ್ನು ನೀಡಿ ಈ ರೀತಿ ಸಿದ್ಧಪಡಿಸಿದ ಜೇಷ್ಠತಾ ಪಟ್ಟಿಯನ್ನು ಪ್ರತಿ ವರ್ಷವೂ ಡಿಸೆಂಬರ್, 31ಕ್ಕೆ ಅಂತ್ಯಗೊಂಡಂತೆ ಮುಂದಿನ ವರ್ಷ ಜನವರಿ ಒಂದರನ್ವಯ ತಯಾರಿಸಿ ಫೆಬ್ರವರಿ, 28ರೊಳಗೆ ಹೊರಡಿಸಬೇಕೆಂದು ಎಲ್ಲಾ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿರುತ್ತದೆ.<br>ದಿನಾಂಕ:10.12.2021ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 106 ಸೇನೆನಿ 2021ರಲ್ಲಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಪರಿಷ್ಕೃತ ನಮೂನೆಯನ್ನು ನೀಡಲಾಗಿರುತ್ತದೆ.<br>ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳು ಎಲ್ಲಾ ವೃಂದದ ಜೇಷ್ಠತಾ ಪಟ್ಟಿಯನ್ನು ಪ್ರತಿ ವರ್ಷವೂ ಕಡ್ಡಾಯವಾಗಿ ಪ್ರಕಟಿಸಬೇಕಾಗಿರುತ್ತದೆ. |
| ಉ) | ಕಳೆದ ಮೂರು ವರ್ಷಗಳಿಂದ ಬಡ್ತಿಗಾಗಿ ಹುದ್ದೆಗಳು ಖಾಲಿಯಿದ್ದರೂ ಬಡ್ತಿ ನೀಡದೆ ಇರುವ ಇಲಾಖೆಗಳು ಯಾವುವು; (ಇಲಾಖಾವಾರು ಹುದ್ದೆವಾರು ಸಂಪೂರ್ಣ ವಿವರ ನೀಡುವುದು) | ಬಡ್ತಿಗಾಗಿ ಖಾಲಿ ಇರುವ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಿದ್ದಲ್ಲಿ ಆಯಾ ಇಲಾಖೆಗಳು ನಿಯಮಾನುಸಾರ ಬಡ್ತಿ ನೀಡುತ್ತವೆ. |
| ಊ) | ಪ್ರತಿವರ್ಷ ಜೇಷ್ಠತಾ ಪಟ್ಟಿ ಪ್ರಕಟಿಸದ ಬಡ್ತಿ ನೀಡದ ನಿರ್ಲಕ್ಷ್ಯ ವಹಿಸುವ ಇಲಾಖಾ ಮುಖ್ಯಸ್ಥರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು; ಕ್ರಮ ಕೈಗೊಳ್ಳದೆ ಇದ್ದರೆ ಕೈಗೊಳ್ಳದಿರಲು ಕಾರಣಗಳೇನು; | ಕೆಲವು ಇಲಾಖೆಗಳಲ್ಲಿ ಕೆಲವು ವೃಂದದ ಹುದ್ದೆಗಳ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ನ್ಯಾಯಾಲಯ ಪ್ರಕರಣಗಳು ದಾಖಲಾಗಿ, ಮಾನ್ಯ ನ್ಯಾಯಾಲಯವು ಸದರಿ ಜೇಷ್ಠತಾ ಪಟ್ಟಿಗೆ ತಡೆಯಾಜ್ಞೆಯನ್ನು ನೀಡಿದ್ದಲ್ಲಿ ಅಥವಾ ಇನ್ನಿತರ ಆಡಳಿತಾತ್ಮಕ ಕಾರಣಗಳಿಂದಾಗಿ ಕೆಲವು ಇಲಾಖೆಗಳಲ್ಲಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಸಾಧ್ಯವಾಗಿರುವುದಿಲ್ಲ. |
| ಋ) | ಜೇಷ್ಠತಾ ಪಟ್ಟಿ ಪ್ರಕಟಣೆ ಮತ್ತು ಬಡ್ತಿ ನೀಡುವಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಪಾತ್ರವೇನು? | ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ ಮತ್ತು ಬಡ್ತಿ ನೀಡುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಮಾರ್ಗಸೂಚಿಗಳನ್ನು ನೀಡಲಾಗಿದ್ದು, ಅದರನ್ವಯ ಆಯಾ ವರ್ಷದಲ್ಲಿ ಪ್ರಕಟಿಸಲಾದ ಜೇಷ್ಠತಾ ಪಟ್ಟಿಯನ್ನು ಆಧರಿಸಿ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳುವುದು ಆಯಾಯಾ ಇಲಾಖೆಗಳ ಜವಾಬ್ದಾರಿಯಾಗಿರುತ್ತದೆ. |

**ಕಡತ ಸಂಖ್ಯೆ: ಸಿಆಸುಇ 93 ರಾಸ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ

## ಅನುಬಂಧ-1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ ಎಂ ಗೌಡ, ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1910(2220) ಕ್ಕೆ ಉತ್ತರ**

**ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಂಜೂರಾದ, ಭರ್ತಿಯಾದ ಹಾಗೂ ಖಾಲಿ ಇರುವ ಹುದ್ದೆಗಳ ವಿವರ**

| ಕ್ರ. ಸಂ. | ಇಲಾಖೆ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಹುದ್ದೆಗಳು | ಗುತ್ತಿಗೆ / ಹೊರಗುತ್ತಿಗೆ ಯಿಂದ ಭರ್ತಿ ಮಾಡಿದ ಹುದ್ದೆಗಳು | ನಿವ್ವಳ ಖಾಲಿ ಹುದ್ದೆಗಳು |
|---|---|---|---|---|---|---|
| 1 | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ | 283503 | 203809 | 79694 | 208 | 79486 |
| 2 | ಒಳಾಡಳಿತ | 130142 | 101954 | 28188 | 1570 | 26618 |
| 3 | ಉನ್ನತ ಶಿಕ್ಷಣ | 24791 | 11192 | 13599 | 2724 | 10875 |
| 4 | ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ | 75386 | 37814 | 37572 | 27248 | 10324 |
| 5 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 28247 | 17743 | 10504 | 2744 | 7760 |
| 6 | ಪಶುಸಂಗೋಪನೆ | 18553 | 7533 | 11020 | 3403 | 7617 |
| 7 | ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ | 26915 | 19256 | 7659 | 2286 | 5373 |
| 8 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ | 11230 | 5040 | 6190 | 1603 | 4587 |
| 9 | ಸಹಕಾರ | 7028 | 2302 | 4726 | 337 | 4389 |
| 10 | ಆರ್ಥಿಕ | 17310 | 9642 | 7668 | 3314 | 4354 |
| 11 | ಕೃಷಿ | 10314 | 3438 | 6876 | 2759 | 4117 |
| 12 | ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ | 6838 | 2828 | 4010 | 545 | 3465 |
| 13 | ರೇಷ್ಮೆ | 4560 | 1223 | 3337 | 88 | 3249 |
| 14 | ಪರಿಶಿಷ್ಟ ಜಾತಿಗಳ ಕಲ್ಯಾಣ | 15398 | 5752 | 9646 | 6515 | 3131 |
| 15 | ಅರಣ್ಯ | 14766 | 8288 | 6478 | 3579 | 2899 |
| 16 | ಹಿಂದುಳಿದ ವರ್ಗಗಳ ಕಲ್ಯಾಣ | 15300 | 6775 | 8525 | 5686 | 2839 |
| 17 | ತೋಟಗಾರಿಕೆ | 6206 | 3292 | 2914 | 467 | 2447 |
| 18 | ಕಾರ್ಮಿಕ | 4507 | 1839 | 2668 | 1305 | 1363 |
| 19 | ಸಾರಿಗೆ | 2772 | 1231 | 1541 | 314 | 1227 |
| 20 | ಲೋಕೋಪಯೋಗಿ | 6271 | 4863 | 1408 | 282 | 1126 |

| | | | | | | |
|---|---|---|---|---|---|---|
| 21 | ಆಹಾರ ಮತ್ತು ನಾಗರೀಕ ಸರಬರಾಜು | 2643 | 1201 | 1442 | 492 | 950 |
| 22 | ಪರಿಶಿಷ್ಟ ಪಂಗಡಗಳ ಕಲ್ಯಾಣ | 2868 | 433 | 2435 | 1514 | 921 |
| 23 | ಸಣ್ಣ ನೀರಾವರಿ | 2039 | 1170 | 869 | 154 | 715 |
| 24 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 7002 | 3611 | 3391 | 2794 | 597 |
| 25 | ಮೀನುಗಾರಿಕೆ | 1419 | 581 | 838 | 303 | 535 |
| 26 | ನಗರಾಭಿವೃದ್ಧಿ | 1451 | 537 | 914 | 397 | 517 |
| 27 | ಗಣಿ | 1158 | 502 | 656 | 221 | 435 |
| 28 | ಭಾರಿ ನೀರಾವರಿ | 1389 | 780 | 609 | 294 | 315 |
| 29 | ಕನ್ನಡ ಮತ್ತು ಸಂಸ್ಕೃತಿ | 596 | 152 | 444 | 169 | 275 |
| 30 | ಯೋಜನೆ, ಸಾಂಖ್ಯಿಕ , ವಿಜ್ಞಾನ ಮತ್ತು ತಂತ್ರಜ್ಞಾನ | 1513 | 792 | 721 | 465 | 256 |
| 31 | ಸಣ್ಣ ಕೈಗಾರಿಕೆ | 533 | 173 | 360 | 107 | 253 |
| 32 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 640 | 246 | 394 | 143 | 251 |
| 33 | ವಾರ್ತಾ | 565 | 225 | 340 | 115 | 225 |
| 34 | ಪ್ರವಾಸೋದ್ಯಮ | 531 | 145 | 386 | 238 | 148 |
| 35 | ಇಂಧನ | 407 | 220 | 187 | 57 | 130 |
| 36 | ಸಂಸದೀಯ ವ್ಯವಹಾರಗಳು | 1597 | 1164 | 433 | 305 | 128 |
| 37 | ಯುವಜನ ಸೇವೆಗಳು | 324 | 112 | 212 | 171 | 41 |
| 38 | ಕೈಮಗ್ಗ ಮತ್ತು ಜವಳಿ | 82 | 38 | 44 | 28 | 16 |
| 39 | ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ | 75 | 14 | 61 | 70 | -9 |
| 40 | ಪರಿಸರ ಮತ್ತು ಜೀವಿಶಾಸ್ತ್ರ | 12 | 2 | 10 | 88 | -78 |
| 41 | ವಸತಿ | 0 | 0 | 0 | 101 | -101 |
| 42 | ಮೂಲಸೌಲಭ್ಯ ಅಭಿವೃದ್ಧಿ | 0 | 0 | 0 | 143 | -143 |
| 43 | ಇ - ಆಡಳಿತ | 77 | 4 | 73 | 369 | -296 |
| 44 | ಅಲ್ಪಸಂಖ್ಯಾತರ ಕಲ್ಯಾಣ | 7086 | 2114 | 4972 | 5753 | -781 |
| 45 | ಕಂದಾಯ | 32370 | 21503 | 10867 | 15376 | -4509 |
| | ಒಟ್ಟು | **776414** | **491533** | **284881** | **96844** | **188037** |

## ಅನುಬಂಧ-2

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಚಿದಾನಂದ್ ಎಂ. ಗೌಡ(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ:1910 (2220) ಕ್ಕೆ ಮಾಹಿತಿ**

**ರಾಜ್ಯದಲ್ಲಿ ಕಳೆದ 03 ವರ್ಷಗಳಲ್ಲಿ ನಿವೃತ್ತಿಯಾದ ನೌಕರರ ಸಂಖ್ಯೆ**

| ಕ್ರ. ಸಂ | DEPT_NAME | 2023 | 2024 | 2025 |
|---|---|---|---|---|
| 1. | Ac-Public Works Department (Architecture Wing) | 1 | 2 | 2 |
| 2. | AD-DEPARTMENT OF ADVOCATE GENERAL | 26 | 0 | 0 |
| 3. | AH-DEPT OF ANIMAL HUSBANDARY & VET SERVICE | 111 | 93 | 73 |
| 4. | AJ-HIGH COURT & SUBORDINATE COURTS | 264 | 308 | 275 |
| 5. | AL-DEPT OF AGRICULTURE | 107 | 84 | 55 |
| 6. | AM-DEPARTMENT OF AGRICULTURAL MARKETING | 45 | 34 | 13 |
| 7. | AR-DEPARTMENT OF ARCHAEOLOGY, MUSEUMS AND HERITAGE | 10 | 3 | 1 |
| 8. | AT-ADMINISTRATIVE TRANING INSTITUTE MYSORE | 11 | 3 | 2 |
| 9. | AV-KARNATAKA STATE ARCHIVES | 3 | 1 | 0 |
| 10. | BW-DEPARTMENT OF BACKWARD CLASSES | 5 | 2 | 0 |
| 11. | Ca-Co Operative Audit Department | 28 | 14 | 4 |
| 12. | Cd-Co-Operative Department Election Authority | 2 | 0 | 2 |
| 13. | Directorate Of Child Protection | 3 | 12 | 2 |
| 14. | CN-KARNATAKA STATE CONSUMER DISPUTE REDRESSAL COMMISSION | 8 | 1 | 2 |
| 15. | CO-Directorate Of Command Area Development Authorities | 50 | 68 | 15 |
| 16. | Cada directorate | 0 | 1 | 0 |
| 17. | CS-DEPARTMENT OF CO-OPERATIVE SOCIETIES | 30 | 20 | 5 |
| 18. | Registrar Of Co-Operative Societies | 0 | 1 | 0 |
| 19. | CT-DEPARTMENT OF COMMERCIAL TAX | 173 | 120 | 48 |
| 20. | DP-SECRETARY, DPAR(ACCOUNTS) | 78 | 64 | 66 |
| 21. | DR-DRUGS CONTROLLER DEPARTMENT | 8 | 8 | 0 |
| 22. | DS-D.P.I. , D.S.E.R.T. | 92 | 83 | 69 |
| 23. | DW-DEPARTMENT OF WELFARE OF DISABLED | 8 | 7 | 0 |
| 24. | EC-DEPARTMENT OF COLLEGIATE EDUCATION | 282 | 281 | 232 |
| 25. | Directorate Of Edcs & E Governance | 0 | 1 | 1 |
| 26. | EI-CHIEF ELECTRICAL INSPECTOR ELECTRICAL INSPECTORATE | 1 | 3 | 0 |
| 27. | EM-DEPARTMENT OF MASS EDUCATION | 1 | 2 | 3 |
| 28. | EN-ENDOWMENT AND MUZRAI DEPARTMENT | 1 | 2 | 1 |
| 29. | EP-DEPARTMENT OF SCHOOL EDUCATION | 988 | 997 | 845 |
| 30. | ES-DEPARTMENT OF SECONDARY EDUCATION | 510 | 477 | 456 |
| 31. | ET-DEPARTMENT OF TECHNICAL EDUCATION | 94 | 94 | 56 |
| 32. | EX-STATE EXCISE DEPARTMENT | 77 | 65 | 49 |
| 33. | EY-DIRECTORATE OF EMPLOYMENT AND TRAINING | 78 | 74 | 303 |
| 34. | FB-DEPARTMENT OF FACTORIES AND BOILERS | 5 | 6 | 0 |
| 35. | FC-DEPARTMENT OF FOOD AND CIVIL SUPPLIES | 14 | 12 | 6 |
| 36. | FI-DEPARTMENT OF FISHERIES | 16 | 10 | 0 |
| 37. | Fo-Forest Department | 184 | 135 | 101 |
| 38. | FR-DEPARTMENT OF FIRE SERVICES | 127 | 121 | 59 |
| 39. | FW-DEPT OF HEALTH & FAMILY WELFARE | 373 | 302 | 190 |
| 40. | Medical Education Institutions | 10 | 11 | 1 |

| | | | | |
|---|---|---|---|---|
| 41. | GU-SPECIAL OFFICER GOVERNMENT GUEST HOUSES | 8 | 8 | 0 |
| 42. | Directorate Of Ground Water | 0 | 4 | 1 |
| 43. | High Court Of Karnataka | 0 | 1 | 0 |
| 44. | HG-DEPARTMENT OF HOME GUARDS, CIVIL DEFENCE AND FIRE FORCE | 8 | 5 | 6 |
| 45. | HO-DEPARTMENT OF HORTICULTURE | 65 | 55 | 43 |
| 46. | Karnataka State Human Rights Commission | 4 | 1 | 0 |
| 47. | IC-DEPARTMENT OF INDUSTRIES & COMMERCE | 7 | 11 | 2 |
| 48. | Icc-Small Industries Development Corporation Limited | 0 | 1 | 1 |
| 49. | IL-Dpar(Accounts-IRLA) | 46 | 8 | 4 |
| 50. | IM-AYURVEDA, YOGA AND NATUROPATHY, UNANI ,SIDDHA AND HOMEOPATHY (AYUSH) | 10 | 22 | 3 |
| 51. | IN-DEPARTMENT OF INFORMATION AND PUBLICITY | 18 | 11 | 9 |
| 52. | IR-IRRIGATION DEPARTMENT | 63 | 53 | 50 |
| 53. | IS-Department of ESIS Medical service | 44 | 26 | 22 |
| 54. | Karnataka State Administrative Tribunal | 15 | 14 | 10 |
| 55. | KB-KARNATAKA BHAVAN, NEW DELHI | 4 | 6 | 3 |
| 56. | KC-DEPARTMENT OF KANNADA AND CULTURE | 5 | 12 | 2 |
| 57. | KG-KARNATAKA GOVT. INSURANCE DEPARTMENT | 20 | 16 | 2 |
| 58. | KI-KARNATAKA INFORMATION COMMISSION | 5 | 2 | 3 |
| 59. | Karnataka Law Commission | 0 | 1 | 1 |
| 60. | Kt-Karnataka State Appellate Tribunal | 6 | 4 | 3 |
| 61. | LA-LEGISLATIVE ASSEMBLY SECRETARIAT | 23 | 20 | 19 |
| 62. | LB-DEPARTMENT OF LABOUR | 15 | 11 | 5 |
| 63. | LC-KARNATAKA LEGISLATIVE COUNCIL SECRETARIAT | 9 | 7 | 4 |
| 64. | LI-DEPARTMENT OF PUBLIC LIBRARIES | 22 | 33 | 12 |
| 65. | LM-CONTROLLER OF LEGAL METROLOGY | 11 | 7 | 1 |
| 66. | LO-KARNATAKA LOKAYUKTA | 20 | 14 | 19 |
| 67. | LR-DEPARTMENT OF SURVEY AND SETTLEMENT | 84 | 78 | 27 |
| 68. | MI-DEPARTMENT OF MINES AND GEOLOGY | 15 | 7 | 0 |
| 69. | MN-DEPARTMENT OF MINORITIES | 3 | 5 | 2 |
| 70. | MR-DEPARTMENT OF MINOR IRRIGATION | 70 | 54 | 32 |
| 71. | MU-DIRECTOR OF MUNICIPAL ADMINISTRATION | 25 | 44 | 11 |
| 72. | MV-COMMISSIONER OF TRANSPORTS | 53 | 58 | 28 |
| 73. | NC-N.C.C. | 24 | 29 | 21 |
| 74. | PC-KARNATAKA PUBLIC SERVICE COMMISSION | 4 | 4 | 9 |
| 75. | Ph-Department Of Panchayatraj Engineering | 38 | 37 | 12 |
| 76. | PI-COMMISSIONER FOR SCHOOL EDUCATION | 110 | 78 | 89 |
| 77. | PM-RURAL DRINKING WATER AND SANITATION DEPARTMENT | 69 | 39 | 18 |
| 78. | PN-DEPARTMENT OF PROSECUTION | 26 | 22 | 4 |
| 79. | Po-Police Department | 1976 | 1672 | 903 |
| 80. | PP-DIRECTOR POPULATION CENTER | 0 | 0 | 1 |
| 81. | PR-DEPARTMENT OF PRISONS | 25 | 23 | 16 |
| 82. | PS-DEPARTMENT OF PRINTING AND STATIONERY | 40 | 37 | 14 |
| 83. | PU-PRE-UNIVERSITY BOARD | 373 | 372 | 368 |
| 84. | PW-PUBLIC WORKS DEPARTMENT | 165 | 149 | 86 |
| 85. | QA-DEPARTMENT OF AGRICULTURE | 44 | 25 | 8 |
| 86. | QB-DEPARTMENT OF BACKWARD CLASSES AND MINORITIES (TP) | 174 | 146 | 66 |
| 87. | QE-DEPARTMENT OF SCHOOL EDUCATION | 4376 | 4227 | 3773 |

| | | | | |
|---|---|---|---|---|
| 88. | QH-DEPARTMENT OF HEALTH AND FAMILY WELFARE | 8 | 13 | 8 |
| 89. | QO-DEPARTMENT OF HORTICULTURE (TP) | 0 | 1 | 0 |
| 90. | QQ-EXECUTIVE OFFICERS(TALUKA PANCHAYAT) | 300 | 236 | 206 |
| 91. | QR-DEPARTMENT OF FISHERIES (TP) | 0 | 2 | 0 |
| 92. | Qs-Department Of Social Welfare (Tp) | 165 | 162 | 89 |
| 93. | QV-ANIMAL HUSBANDRY AND VETERINARY SERVICES | 131 | 129 | 85 |
| 94. | Department Of Women And Child Welfare | 36 | 32 | 9 |
| 95. | RB-SECRETARY, RAJBHAVAN | 0 | 4 | 7 |
| 96. | RD-REVENUE DEPARTMENT | 253 | 211 | 103 |
| 97. | Karnataka State Rural Development And Panchyat Raj University | 0 | 0 | 1 |
| 98. | Rural Development And Panchayat Raj Department | 3 | 6 | 5 |
| 99. | SA-KARNATAKA STATE AUDIT AND ACCOUNTS DEPARTMENT | 12 | 5 | 4 |
| 100 | SC-STATE ELECTION COMMISSION | 0 | 3 | 1 |
| 101 | SE-COMMISSIONER FOR SERICULTURE DEVELOPMENT AND DIRECTOR OF SERICULTURE | 173 | 104 | 38 |
| 102 | SG-COMMISSIONER FOR CANE DEVELOPMENT AND DIRECTOR OF SUGAR | 0 | 1 | 0 |
| 103 | SN-DIRECTOR, SAINIK WELFARE | 6 | 3 | 2 |
| 104 | SR-DEPARTMENT OF STAMPS AND REGISTRATION | 25 | 28 | 11 |
| 105 | SS-DEPARTMENT OF SMALL SAVINGS AND STATE LOTTERIES | 10 | 4 | 4 |
| 106 | Department Of Economics And Statistics | 21 | 17 | 6 |
| 107 | SW-DEPARTMENT OF SOCIAL WELFARE | 3 | 3 | 2 |
| 108 | Sy-Directorate Of Youth Empowerment And Sports | 3 | 6 | 0 |
| 109 | TA-DEPARTMENT OF TREASURIES | 52 | 47 | 13 |
| 110 | TL-TRANSLATION DEPARTMENT | 2 | 1 | 0 |
| 111 | TP-DEPARTMENT OF TOWN & COUNTRY PLANNING | 9 | 4 | 7 |
| 112 | TT-TRANSPORT APPELLATE TRIBUNAL | 0 | 0 | 2 |
| 113 | TU-DEPARTMENT OF TOURISM | 2 | 3 | 0 |
| 114 | TW-DIRECTORATE OF TRIBAL WELFARE | 3 | 7 | 2 |
| 115 | Tx-Department Of Handloom And Textile | 9 | 10 | 3 |
| 116 | UD-BANGLORE METROPOLITON TASK FORCE | 1 | 1 | 0 |
| 117 | Karnataka Neervari Nigam Limited | 30 | 25 | 15 |
| 118 | Cauvery Neeravari Nigama Ltd | 0 | 1 | 2 |
| 119 | WS-DEPARTMENT OF WATERSHED DEVELOPMENT | 4 | 3 | 4 |
| 120 | Visvesvaraya Jala Nigama Limited | 4 | 3 | 3 |
| 121 | Dept Of Women And Child Welfare | 40 | 11 | 3 |
| 122 | ZA-DEPARTMENT OF AGRICULTURE(ZP) | 70 | 59 | 27 |
| 123 | ZB-DEPARTMENT OF BACKWARD CLASSES AND MINORITIES(ZP) | 26 | 21 | 6 |
| 124 | ZE-DEPARTMENT OF SCHOOL EDUCATION(ZP) | 272 | 226 | 171 |
| 125 | Zf-Karnataka Department Of Forest(Zp) | 25 | 26 | 13 |
| 126 | ZH-DEPARTMENT OF HEALTH AND FAMILY WELFARE | 482 | 465 | 309 |
| 127 | ZI-INDUSTRIAL DEV AND DIRECTOR OF INDUSTRIES AND COMMERCE (ZP) | 2 | 3 | 0 |
| 128 | ZO-DEPARTMENT OF HORTICULTURE (ZP) | 30 | 31 | 16 |
| 129 | ZP-DEPARTMENT OF PUBLIC WORKS (ZP) | 88 | 90 | 47 |
| 130 | ZR-DEPARTMENT OF FISHERIES (ZP) | 4 | 3 | 1 |
| 131 | ZS-DEPARTMENT OF SOCIAL WELFARE (ZP) | 3 | 9 | 7 |
| 132 | ZU- AYURVEDA, YOGA AND NATUROPATHY, UNANI ,SIDDHA AND HOMEOPATHY (AYUSH) (ZP) | 29 | 20 | 9 |

| | | | | |
|---|---|---|---|---|
| 133 | ZV-DEPARTMENT OF ANIMAL HUSBANDRY AND VETERINARY SERVICES | 202 | 189 | 133 |
| 134 | Women & Child Development Department (Zp) | 26 | 18 | 3 |
| 135 | Zy-Directorate Of Youth Empowerment And Sports (Z.P) | 2 | 1 | 1 |
| 136 | ZZ-CHIEF EXECUTIVE OFFICER (ZILLA PANCHAYATH) | 69 | 47 | 37 |
| | **TOTAL** | **14581** | **13275** | **10065** |

ಅನುಬಂಧ-3.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: 2022ರ ಅಧಿನಿಯಮದನ್ವಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹೆಚ್ಚಿಸಲಾದ ಮೀಸಲಾತಿ ಪ್ರಮಾಣವನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದ ಹಿನ್ನಲೆಯಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು.

**ಓದಲಾಗಿದೆ**:

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995, ದಿನಾಂಕ 20.06.1995
2. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2022, ದಿನಾಂಕ: 28.12.2022
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2023, ದಿನಾಂಕ: 8.3.2023
5. ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024 (ಭಾ-1), ದಿನಾಂಕ: 25-08-2025
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 2 ಸೇಹಿಮ 2025, ದಿನಾಂಕ: 03-09-2025
7. ಮಾನ್ಯ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 200448 /2025, 17968/2025 ಮತ್ತು 3145/2023ರಲ್ಲಿ ದಿನಾಂಕ 27.11.2025ರಂದು ನೀಡಿರುವ ಮಧ್ಯಂತರ ಆದೇಶ.

**ಪ್ರಸ್ತಾವನೆ**:

ಮೇಲೆ (1)ರಲ್ಲಿ ಓದಲಾದ ದಿನಾಂಕ 20.06.1995ರ ಸರ್ಕಾರದ ಆದೇಶದಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಕ್ರಮವಾಗಿ ನಿಗಧಿಪಡಿಸಲಾಗಿದ್ದ ಶೇ15 ಮತ್ತು ಶೇ 3 ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ಭರ್ತಿ ಮಾಡಬೇಕಾದ ರಿಕ್ತ ಸ್ಥಾನಗಳಿಗೆ 100 ಬಿಂದುಗಳ ರೋಸ್ಟರನ್ನು ನಿಗಧಿಪಡಿಸಲಾಗಿರುತ್ತದೆ.

24/02/2026

2. ಮೇಲೆ (2) ರಲ್ಲಿ ಓದಲಾದ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ರಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ರಾಜ್ಯದ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಶೇ. 17 ಮತ್ತು ಶೇ.7 ರಂತೆ ಮೀಸಲಾತಿ ಪ್ರಮಾಣವನ್ನು ಅನುಕ್ರಮವಾಗಿ ಹೆಚ್ಚಿಸಲಾಗಿರುತ್ತದೆ.

3. ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ 2022ರ ಅಧಿನಿಯಮದನ್ವಯ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ 100 ಬಿಂದುಗಳ ಪರಿಷ್ಕೃತ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

4. ಮೇಲೆ (4) ರಲ್ಲಿ ಓದಲಾದ ದಿನಾಂಕ 08.03.2023ರ ಸರ್ಕಾರದ ಆದೇಶದಲ್ಲಿ ಪ್ರತಿಯೊಂದು ನೇರ ಮೀಸಲಾತಿ ಪ್ರವರ್ಗದಡಿ (under each category of vertical reservation) ಮಾಜಿ ಸೈನಿಕ, ಅಂಗವಿಕಲ, ಮಹಿಳೆ, ಯೋಜನೆಗಳಿಂದ ನಿರ್ವಸಿತರಾದವರು, ಗ್ರಾಮೀಣ ಅಭ್ಯರ್ಥಿ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ಮತ್ತು ತೃತೀಯ ಲಿಂಗಿಗಳಿಗೆ ಕಲ್ಪಿಸಲಾದ ಸಮತಳ ಮೀಸಲಾತಿಯನ್ನು ಜಾರಿಗೊಳಿಸಲು 100 ಬಿಂದುಗಳ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

5. ಮೇಲೆ (5) ರಲ್ಲಿ ಓದಲಾದ ದಿನಾಂಕ 25.08.2025ರ ಸರ್ಕಾರದ ಆದೇಶದಲ್ಲಿ ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳನ್ನು ಪ್ರವರ್ಗ-ಎ ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಗಳೆಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಶೇಕಡ 17 ಮೀಸಲಾತಿಯನ್ನು, ಪ್ರವರ್ಗ-ಎ ರಲ್ಲಿನ ಸಮುದಾಯಗಳಿಗೆ ಶೇಕಡ 6, ಪ್ರವರ್ಗ-ಬಿ ರಲ್ಲಿನ ಸಮುದಾಯಗಳಿಗೆ ಶೇಕಡ 6 ಮತ್ತು ಪ್ರವರ್ಗ-ಸಿ ರಲ್ಲಿನ ಸಮುದಾಯಗಳಿಗೆ ಶೇಕಡ 5 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

6. ಮೇಲೆ (6) ರಲ್ಲಿ ಓದಲಾದ ದಿನಾಂಕ 03.09.2025ರ ಸರ್ಕಾರದ ಆದೇಶದಲ್ಲಿ ದಿನಾಂಕ 28.12.2022ರ ಆದೇಶದಲ್ಲಿ ನಿಗದಿಪಡಿಸಲಾಗಿದ್ದ 100 ಬಿಂದುಗಳ ಮೀಸಲಾತಿ ರೋಸ್ಟರಿನಲ್ಲಿ ಪರಿಶಿಷ್ಟ ಜಾತಿಗಳಿಗೆ ಗುರುತಿಸಲಾಗಿರುವ 17 ಬಿಂದುಗಳನ್ನು ಮಾತ್ರ ಸದರಿ ಆದೇಶದದಲ್ಲಿರುವ ಅನುಬಂಧದಂತೆ ಪುನರ್ ವರ್ಗೀಕರಿಸಿ ಆದೇಶಿಸಲಾಗಿರುತ್ತದೆ.

7. ಮೇಲೆ (7)ರಲ್ಲಿ ಓದಲಾದ ಪ್ರಕರಣಗಳಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ರನ್ವಯ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ.15 ರಿಂದ ಶೇ.17ಕ್ಕೆ ಹಾಗೂ ಶೇ.3 ರಿಂದ ಶೇ.7ಕ್ಕೆ ಹೆಚ್ಚಿಸಲಾಗಿರುವುದನ್ನು ಪ್ರಶ್ನಿಸಲಾಗಿದ್ದು, ಸದರಿ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು **ದಿನಾಂಕ: 27.11.2025ರಂದು ಕೆಳಗಿನಂತೆ** ಮಧ್ಯಂತರ ಆದೇಶ ನೀಡಿರುತ್ತದೆ.

> 6. Considering that recruitment process has already begun pursuant to certain notifications specifying the enhanced reservation under the Karnataka Scheduled Castes and Scheduled Tribes (Reservation of Seats in Education Institutions and Appointments of Posts and Services under the State) Act, 2022 (hereafter Act), **we consider it apposite to modify our order dated 19.11.2025 to direct that no further notifications for recruitment or appointment on the basis of increased reservation would be issued till the disposal of the present petitions. The recruitment pursuant to the process that is already begun, may be continued. However, any appointment made shall be subject to the final outcome of the present petitions.**

8. ಮಾನ್ಯ ಉಚ್ಚ ನ್ಯಾಯಾಲಯವು ಮೇಲಿನಂತೆ ನೀಡಿರುವ ಮಧ್ಯಂತರ ಆದೇಶದಿಂದಾಗಿ ಹಲವಾರು ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯ

ಸ್ಥಗಿತಗೊಂಡಿದ್ದು, ನಿರುದ್ಯೋಗಿ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಹಾಗೂ ಆಡಳಿತಾತ್ಮಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತಿರುವುದರಿಂದ ನೇಮಕಾತಿ ಪ್ರಕ್ರಿಯೆಯನ್ನು ತುರ್ತಾಗಿ ಮುಂದುವರೆಸಬೇಕಾಗಿರುವುದರಿಂದ ನೇಮಕಾತಿ ಅಧಿಸೂಚನೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022, ದಿನಾಂಕ: 28-12-2022ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ (ಮೀಸಲಾತಿ ಪ್ರಮಾಣ ಶೇ.50ಕ್ಕೆ) ಹೊರಡಿಸುವುದು ಸೂಕ್ತವೆಂದು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 01 ಸೇಹಿಮ 2026,**

**ಬೆಂಗಳೂರು, ದಿನಾಂಕ: 27.02.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಸನ್ನಿವೇಶದಲ್ಲಿ, ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

1. ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022ನ್ನು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡುವ ಅಂತಿಮ ತೀರ್ಪಿಗೆ ಒಳಪಟ್ಟು ಹಾಗೂ ಸರ್ಕಾರದ ಮುಂದಿನ ಆದೇಶದವರೆಗೆ, ದಿನಾಂಕ 27.11.2025ರ ನಂತರದಲ್ಲಿ ರಾಜ್ಯ ಸಿವಿಲ್ ಸೇವಾ ಹುದ್ದೆಗಳಿಗೆ ಮಾಡುವ ನೇರ ನೇಮಕಾತಿಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೇಹಿಮ 2022, ದಿನಾಂಕ: 28-12-2022ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ (ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995, ದಿನಾಂಕ 20.06.1995ರನ್ವಯ ಮೀಸಲಾತಿ ಪ್ರಮಾಣವನ್ನು ಶೇ.50ಕ್ಕೆ) ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸುವಂತೆ ಎಲ್ಲಾ ನೇಮಕಾತಿ/ಆಯ್ಕೆ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

2. ಈ ರೀತಿಯ ಆಯ್ಕೆಯನ್ನು ಹಿಂದಿನ ನೇಮಕಾತಿಯಲ್ಲಿ ಅಂದರೆ ದಿನಾಂಕ 28.12.2022ರ ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಯಾವ ಬಿಂದುವಿನಲ್ಲಿ

ನಿಲ್ಲಿಸಲಾಗಿತ್ತೋ ಆ ಬಿಂದುವಿನ ಮುಂದಿನ ರೋಸ್ಟರ್ ಬಿಂದುವಿಗೆ ಸರಿಸಮವಾದ ಬಿಂದುವನ್ನು ದಿನಾಂಕ 20.06.1995ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 8 ಸೇಹಿಮ 1995ರಲ್ಲಿ ಗುರುತಿಸಿ ಅಲ್ಲಿಂದ ಪ್ರಾರಂಭಿಸಿ ಆಯ್ಕೆ ಮಾಡತಕ್ಕದ್ದು. (ಉದಾಹರಣೆಗೆ ಹಿಂದಿನ ನೇಮಕಾತಿಯಲ್ಲಿ ದಿನಾಂಕ 28.12.2022ರ ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಅನುಸಾರ 10 ನೇ ಬಿಂದುವಿನವರೆಗೆ ಪೂರ್ಣಗೊಳಿಸಲಾಗಿದ್ದಲ್ಲಿ, ಈಗ ಮಾಡಬೇಕಾಗಿರುವ ಆಯ್ಕೆಯನ್ನು ದಿನಾಂಕ 20.06.1995ರ ಆದೇಶದಲ್ಲಿನ ಅನುಬಂಧ-1ರ ರೋಸ್ಟರಿನ 11 ನೇ ಬಿಂದುವಿನಿಂದ ಪ್ರಾರಂಭಿಸಿ ಪೂರ್ಣಗೊಳಿಸತಕ್ಕದ್ದು).

3. ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 27.11.2025ರ ಮಧ್ಯಂತರ ಆದೇಶಕ್ಕಿಂತ ಹಿಂದೆ ನೇಮಕಾತಿಗಾಗಿ ಅಧಿಸೂಚನೆಯನ್ನು ಹೊರಡಿಸಿರುವ ಪ್ರಕರಣಗಳನ್ನು ಯಥಾಪ್ರಕಾರ ಮುಂದುವರೆಸಿ, ಅಂತಿಮಗೊಳಿಸುವುದು ಹಾಗೂ ನೇಮಕಾತಿ ಆದೇಶದಲ್ಲಿ ಸ್ಪಷ್ಟವಾಗಿ ಈ ನೇಮಕಾತಿಯು ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೊಳಪಟ್ಟಿರುತ್ತದೆಂದು ಷರಾ ದಾಖಲಿಸತಕ್ಕದ್ದು.

4. ಸಮತಳ ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2023, ದಿನಾಂಕ: 8.3.2023ರಲ್ಲಿ ನಿಗದಿಪಡಿಸಲಾಗಿರುವ ರೋಸ್ಟರ್ ಬಿಂದುಗಳನ್ನೇ ಮುಂದುವರೆಸುವುದು. ಹಿಂದಿನ ನೇಮಕಾತಿಯಲ್ಲಿ ದಿನಾಂಕ 08.03.2023 ಆದೇಶದಲ್ಲಿ ಗೊತ್ತುಪಡಿಸಿರುವ ರೋಸ್ಟರಿನ ಯಾವ ಬಿಂದುವಿನಲ್ಲಿ ನಿಲ್ಲಿಸಲಾಗಿತ್ತೋ ಆ ಬಿಂದುವಿನ ಮುಂದಿನ ರೋಸ್ಟರ್ ಬಿಂದುವಿನಿಂದ ಪ್ರಾರಂಭಿಸಿ ಆಯ್ಕೆ ಮಾಡತಕ್ಕದ್ದು.

5. ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಆಯಾ ಇಲಾಖೆಗಳು / ನೇಮಕಾತಿ ಪ್ರಾಧಿಕಾರಗಳು ಮುಂದಿನ ನೇಮಕಾತಿ ಮಾಡಿಕೊಳ್ಳುವ ಹುದ್ದೆಗಳಲ್ಲಿ ಶೇ 6 ರಷ್ಟು (ಪರಿಶಿಷ್ಟ ಜಾತಿಗೆ ಶೇ.2 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ 4) ಹುದ್ದೆಗಳನ್ನು ಕಾಯ್ದಿರಿಸತಕ್ಕದ್ದು.

A. N. Ashokkumar
27/01/2026

6. ಮುಂದುವರೆದು, ಖಾಲಿಯಿರುವ ನೇರ ನೇಮಕಾತಿ ಹುದ್ದೆಗಳಲ್ಲಿ ಸುಮಾರು 56432 ಹುದ್ದೆಗಳನ್ನು ತುಂಬುವ ಪ್ರಕ್ರಿಯೆಯನ್ನು ಮುಂದಿನ 30 ದಿನಗಳಲ್ಲಿ ಪ್ರಾರಂಭಿಸುವಂತೆ ಎಲ್ಲಾ ಇಲಾಖೆಗಳಿಗೆ / ನೇಮಕಾತಿ ಪ್ರಾಧಿಕಾರಗಳಿಗೆ ತಿಳಿಸಿದೆ

ಮೇಲಿನ ಸೂಚನೆಗಳು ಸರ್ಕಾರದ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

27/02/2026
(ಆಶಾ ಕುಮಾರಿ ಎ. ಜೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಇದರ 50 ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-ಎ), ಕೊಠಡಿ ಸಂಖ್ಯೆ-31, ವಿಧಾನಸೌಧ, ನೆಲಮಹಡಿ ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ), (ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು

7. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು.
8 *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
9. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.
10. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009
14. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಪ್ರಾದೇಶಿಕ ಆಯುಕ್ತರು.
16. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್/ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
17. ಸರ್ಕಾರದ ಅಪರ ಕಾರ್ಯದರ್ಶಿ (ಸಚಿವ ಸಂಪುಟ) (ಪ್ರಕರಣ ಸಂಖ್ಯೆ: ಸಿ.138/2026)
18. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
19. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
20. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

(*ಮುಖ ಪತ್ರದೊಂದಿಗೆ)